

## ಸಫಾರಿ ವೇಳೆ ಕಂಡ ಉಡ

ಈಚೆಗೆ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಸಫಾರಿಗೆ ಹೋಗಿದ್ದಾಗ ಕಂಡ ಉಡ ಇದು. ವಿಶ್ರಮಿಸುತ್ತಿದ್ದ ಈ ಮಾನಿಟರ್ ಹಲ್ಲಿ ಅಥವಾ ಉಡ ವಿಶಿಷ್ಟವಾಗಿ ಕಂಡಿತು. ಉರಗ ಜಾತಿಯ ಇದು ಹಲ್ಲಿಗಿಂತಲೂ ಗಾತ್ರದಲ್ಲಿ ಸಾಕಷ್ಟು ದೊಡ್ಡದು. ಏಷ್ಯಾ, ಆಫ್ರಿಕಾ ಖಂಡಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ನಮ್ಮ ಕಾಡುಗಳಲ್ಲೂ ಕಾಣಸಿಗುತ್ತದೆ. ಉದ್ದದ ಕುತ್ತಿಗೆ, ಬಲಶಾಲಿ ಬಾಲ ಹೊಂದಿದ ಇದು ಬಹುತೇಕ ನೆಲದ ವಾಸಿ. ಇದರ ಕೆಲವು ಪ್ರಭೇದಗಳು ಮರಗಳ ಮೇಲೂ ಭಾಗಶಃ ನೀರಿನಲ್ಲೂ ವಾಸಿಸುತ್ತವೆ. ಕೆಲವು ಪ್ರಭೇದಗಳ ವಯಸ್ಕ ಉಡವು ಇಪ್ಪತ್ತು ಸೆಂಟಿಮೀಟರ್‌ನಿಂದ ಮೂರು ಮೀಟರ್ ಉದ್ದದವರೆಗೂ ಬೆಳೆಯಬಲ್ಲದು! ಇವು ಮಾಂಸಾಹಾರಿಗಳು. ಮೊಟ್ಟೆಗಳು, ಉರಗಗಳು, ಪಕ್ಷಿಗಳು, ಸಸ್ತನಿಗಳು, ಮತ್ತು ಕೀಟಗಳೇ ಇವುಗಳ ಆಹಾರ.

—ಡಾ. ಬಿ.ಆರ್. ಸುಹಾಸ್, ಬೆಂಗಳೂರು

## ಗಂಟು ಕಳ್ಳಿ!



ಗಂಟು ಕಳ್ಳಿ ಇವಳ ಹೆಸರು. ಇವಳು ಸಂಪತ್ತನ್ನು ಕದಿಯುವ ಕಳ್ಳಿಯಲ್ಲ. ಜನರ ನೋವುಗಳನ್ನು ಉಪಶಮನ ಮಾಡುವ ಕಳ್ಳಿ. ಚಿತ್ರದಲ್ಲಿ ಕಾಣುತ್ತಿರುವ ಗಿಡಕ್ಕೆ ಗಂಟು ಕಳ್ಳಿ, ಸಂಧಿ ಕಳ್ಳಿ ಅಥವಾ ವಾತ ಕಳ್ಳಿ ಎಂಬ ಹೆಸರೂ ಇದೆ. ಕಳ್ಳಿ ಜಾತಿಗೆ ಸೇರಿದ ಔಷಧೀಯ ಗಿಡವಿದು. ಮುಳ್ಳುಮುಳ್ಳಿನ ಟೊಂಗೆಯಂತಹ ರಚನೆಯುಳ್ಳ ಇದು ದೊಡ್ಡ ಮರದಂತೆ ಬೆಳೆಯಬಲ್ಲದು.

ಗಂಟುನೋವು, ನರಸೆಳೆತ, ಕಾಲುಜೋಮು ಸಮಸ್ಯೆಗೆ ಈ ಗಿಡವು ಪರಿಹಾರವಾಗಿದೆ. ಅದಕ್ಕಾಗಿ ಒಂದೆರಡು ಬೆರಳಿನಷ್ಟು ಉದ್ದದ ಕಳ್ಳಿಯ ತುಂಡನ್ನು ಕತ್ತರಿಸಿ, ಅದರ ಮುಳ್ಳುಗಳನ್ನು ತೆಗೆದು ನಂತರ ಅದನ್ನು ಸಣ್ಣದಾಗಿ ಹೆಚ್ಚಿಕೊಳ್ಳಬೇಕು. ನಂತರ ಅದರ ಸೋನೆಯನ್ನು ತೊಳೆದು ಒಂದು ಲೋಟದಷ್ಟು ನೀರಿನಲ್ಲಿ ಹಾಕಿ ಅದು ಅರ್ಧ ಲೋಟಕ್ಕೆ ಇಳಿಯುವಂತೆ ಚೆನ್ನಾಗಿ ಕುದಿಸಬೇಕು. ಬಳಿಕ ಅದನ್ನು ಸೋಸಿ ಕೆಲದಿನದ ವರೆಗೆ ಬೆಳಿಗ್ಗೆಯೇ ಕುಡಿಯುವುದರಿಂದ ಸಮಸ್ಯೆ ಪರಿಹಾರವಾಗುತ್ತದೆ. ಆರೈಕೆ ಬೇಡದ ಈ ಗಿಡದ ಟೊಂಗೆಯನ್ನು ನೆಡುವ ಮೂಲಕ ಎಲ್ಲೆಂದರಲ್ಲಿ ಬೆಳೆಸಬಹುದು.

—ಶಾಲಿನಿ ನಾಯಕ್, ಬೆಂಗಳೂರು



## ಬಂಡೆ ಕಲ್ಲುಗಳಲ್ಲಿ ಗರಿಬಿಚ್ಚಿದ ನವಿಲು

ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿನ ಉದ್ಯಾನವನದಲ್ಲಿ ಬಿದ್ದಿದ್ದ ಬಂಡೆ ಕಲ್ಲುಗಳನ್ನು ಅಲ್ಲಿಂದ ತೆರವುಗೊಳಿಸುವ ಮುನ್ನವೇ ಕಲಾವಿದನ ಕಣ್ಣಿಗೆ ಬಿದ್ದು, ನವಿಲಿನ ರೂಪ ತಳೆದಿದೆ. ಬಂಡೆ ಕಲ್ಲುಗಳಿಗೆ ಗರಿಗಳಂತೆ ಬಣ್ಣ ಬಳಿದು, ಸ್ವಲ್ಪ ಕಾಂಕ್ರೀಟ್ ಉಪಯೋಗಿಸಿ ನವಿಲಿನ ಮುಖ ಭಾಗವನ್ನು ಜೋಡಿಸಿ ಅಲ್ಲೊಂದು ಸುಂದರ ಆಕೃತಿ ಮೂಡಿಸಿದ್ದಾರೆ. ಸುತ್ತ ಮುತ್ತ ಶಿರಡಿ ಸಾಯಿ ಬಾಬಾ, ಉದ್ಭವ ಕುಮಾರಸ್ವಾಮಿ, ವೆಂಕಟೇಶ್ವರ, ಆಂಜನೇಯ, ಚಾಮುಂಡಿ ದೇವಸ್ಥಾನ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ದೇಗುಲಗಳನ್ನು ಕಾಣಬಹುದು.

—ಮಮತ ಕಾರ್ತಿಕ್, ಬೆಂಗಳೂರು

### ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ:
editorsu@sudha.co.in

@SudhaWeekly